Crl.Misc.209/2022 ಪಿಡಬ್ಲ್ಯೂ.1

ದಿನಾಂಕ:30.12.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು: ಎದುರುದಾರರ ಪರ ಶ್ರೀ ಡಿ.ಕೆ.ಪಿ. ವಕೀಲರಿಂದ:**</u>

ನನ್ನ ಮತ್ತು ಎದುರುದಾರರ ಮದುವೆ ಅರೇಂಜಡ್ ಮ್ಯಾರೇಜ್ ಆಗಿದೆ. ಎದುರುದಾರರು ನಮ್ಮ ಸಂಬಂಧಿಕರೇನಾಗಿರಲಿಲ್ಲ. ನಾವೆಬ್ಬರೂ ಒಂದೇ ಸಮುದಾಯಕ್ಕೆ ಸೇರಿದವರು. ಮದುವೆಯ ನಂತರ ನಾನು ಮತ್ತು ಎದುರುದಾರರ 6 ತಿಂಗಳುಗಳ ಕಾಲ ಒಟ್ಟಿಗೆ ಇದ್ದೆವು. ಎದುರುದಾರರ ವಯಸ್ಸಾದ ತಾಯಿ ಇದ್ದಾರೆ ಎಂದರೆ ಸರಿ. ಎದುರುದಾರರ ತಾಯಿಗೆ ವಯಸ್ಸಿಗೆ ಸಂಬಂಧಪಟ್ಟ ಕಾಯಿಲೆ ಇದೆ. ಎದುರುದಾರರ ತಂದೆತಾಯಿಗೆ ಎದುರುದಾರರೊಬ್ಬರೇ ಮಗ ಎಂದರೆ ಸರಿ. ಎದುರುದಾರರಿಗೆ ಒಬ್ಬ ತಂಗಿ ಇದ್ದಾರೆ. ಎದುರುದಾರರ ತಂಗಿಗೆ ಮದುವೆಯಾಗಿದ್ದು ಅವರು ತುಮಕೂರಿನಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಒಪ್ಪಿಗೆಯಿಂದಲೇ ನಾನು ಎದುರುದಾರರನ್ನು ಮದುವೆಯಾದೆ. ನಾನು ಎದುರುದಾರರೊಂದಿಗೆ ಇದ್ದಾಗ ಸಣ್ಣ ಪುಟ್ಟ ವಿಚಾರಗಳಿಗೆ ಅವರೊಂದಿಗೆ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ಮೂಡಿಗೆರೆಯಲ್ಲಿ ಬಾಡಿಗೆ ಮನೆ ಮಾಡುವಂತೆ ನಾನು ಎದುರುದಾರರಿಗೆ ಒತ್ತಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಹಲವಾರು ಬಾರಿ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆತಾಯಿ, ಸಂಬಧಿಕರು ಮತ್ತು ಎದುರುದಾರರ ತಾಯಿ ಹಲವಾರು ಬಾರಿ ಪಂಚಾಯಿತಿ ಮಾಡಿ ನನಗೆ ಬುದ್ದಿ ಹೇಳಿರುತ್ತಾರೆ ಎಂದರೆ ಸರಿ. ನಾನು ನನ್ನ ತವರು ಮನೆಗೆ ಬಂದಾದ ನಂತರ ಎದುರುದಾರರ ಹಲವಾರು ಬಾರಿ ಬಂದು ನನ್ನನ್ನು ಕರೆದಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ಸಕರಾಣ ಇಲ್ಲದೇ ನೀವು ಎದುರುದಾರರ ಮನೆ ಬಿಟ್ಟು ಬಂದಿದ್ದೀರ ಎಂದರೆ ಸಾಕ್ಷಿಯು ಅಪಘಾತವಾಗಿ ನನ್ನ ಕಾಲು ಫ್ರ್ಯಾಕ್ಚರ್ ಆಗಿದ್ದ ಕಾರಣ ಎದುರುದಾರರೇ ನನ್ನನ್ನು ನನ್ನ ತವರು ಮನೆಗೆ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ಹಲವಾರು ಬಾರಿ ನನ್ನನ್ನು ಕರೆದರು ಸಹಾ ನಾನು ಹೋಗಿಲ್ಲ ಎಂದರೆ ಸರಿಯಲ್ಲ.

ವಿವಾಹ ಮರುಸ್ಥಾಪನೆ ಆದೇಶ ಕೋರಿ ಎದುರುದಾರರು ನನ್ನ ವಿರುದ್ದ ಮೂಡಿಗೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾನು ಹಾಜರಾಗಿ ಕೇಸು ನಡೆಸುತ್ತಿದ್ದೇನೆ ಎಂದರೆ ಸರಿ. ಆ ಅರ್ಜಿಯಲ್ಲಿ ಮಧ್ಯಂತರ ಜೀವಾನಂಶ ನೀಡುವಂತೆ ಕೋರಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ತಿಂಗಳಿಗೆ ರೂ.3,000/- ದಂತೆ ಮಧ್ಯಂತರ ಜೀವನಾಂಶ ಆದೇಶವಾಗಿದೆ ಎಂದರೆ ಸರಿ. ಆದರಂತೆ ಎದುರುದಾರರ ಹಣ ಪಾವತಿಸುತ್ತಿದ್ದಾರೆ ಎಂದರೆ ಸರಿ. ಇಂದಿಗೂ ಸಹಾ ಎದುರುದಾರರು ನನ್ನನ್ನು ಕರೆದುಕೊಂಡು ಹೋಗಿ ಒಟ್ಟಿಗೆ ಜೀವನ ನಡೆಸಲು ಬಾಧ್ಯಸ್ತರಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆತಾಯಿಗೆ

ಮೂರು ಜನ ಮಕ್ಕಳಿದ್ದು, ಆ ಪೈಕಿ ಇಬ್ಬರು ಹೆಣ್ಣುಮಕ್ಕಳು ಹಾಗೂ ನಾನು ಕೊನೆಯ ಮಗಳಾಗಿದ್ದೇನೆ. ನನ್ನ ಅಣ್ಣನಿಗೆ ಮದುವೆಯಾಗಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ. ಹೇ. ಕೇ. ಸ. ಇ. ಎ. ಒ.,

ಸಾಕ್ಷಿ ಸಹಿಃ

ಸಹಿ/-

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.